International Journal of Kannada Research 2020; 6(4): 52-55

International Journal of Kannada Research
www.kannadajournal.com

**ISSN: 2454–5813**
IJKR 2020; 6(4): 52-55
© 2020 IJKR
www.kannadajournal.com
Received: 01-09-2020
Accepted: 04-10-2020

**ಡಾ. ಸಮತಾ ಬಿ ದೇಶಮಾನೆ**
ಪ್ರಾಧ್ಯಾಪಕರು,
ಸಮಾಜಶಾಸ್ತ್ರ ವಿಭಾಗ,
ಬೆಂಗಳೂರು ವಿಶ್ವವಿದ್ಯಾಲಯ,
ಕರ್ನಾಟಕ, ಭಾರತ

**Corresponding Author:**
**ಡಾ. ಸಮತಾ ಬಿ ದೇಶಮಾನೆ**
ಪ್ರಾಧ್ಯಾಪಕರು,
ಸಮಾಜಶಾಸ್ತ್ರ ವಿಭಾಗ,
ಬೆಂಗಳೂರು ವಿಶ್ವವಿದ್ಯಾಲಯ,
ಕರ್ನಾಟಕ, ಭಾರತ

# ಮಹಿಳಾ ಚಳುವಳಿ: ಸಮಾನತೆ, ಮೀಸಲಾತಿ ಅಭಿವೃದ್ಧಿ ಮತ್ತು ಸಬಲೀಕರಣ

**ಡಾ. ಸಮತಾ ಬಿ ದೇಶಮಾನೆ**

## ಪೀಠಿಕೆ

ಮಹಿಳೆ ಎಂದೊಡನೆ ನಮಗೆ ನೆನಪಾಗುವುದು ಆಕೆ ಕುಟುಂಬ ನಿರ್ವಾಹಕಿ, ಪುರುಷನ ಅಧೀನಳು ಎಂಬಂತೆ ಸಮಾಜದ ಅಭಿವೃದ್ಧಿಯ ದೃಷ್ಠಿಕೋನದಲ್ಲಿ ಆಕೆಯನ್ನು ನೋಡುವುದೇ ಇಲ್ಲ. ಇಂದು ಜಗತಿತನ ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದಾರೆ. ಹೀಗಿದ್ದರೂ ಅವರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಾನಮಾನಗಳು ಪುರುಷರಿಗಿಂತಲೂ ಕೆಳಮಟ್ಟದಲ್ಲಿವೆ. ಜಪಾನ್, ಅಮೇರಿಕಾ, ಭಾರತ, ಚೀನಾ ಮುಂತಾದ ಮುಂದುವರೆದ ಅಥವಾ ಮುಂದುವರೆಯುತ್ತಿರುವ ವಿಶ್ವದ ಯಾವುದೇ ದೇಶದ ಹಿನ್ನೆಲೆಯನ್ನು ಉದಾಹರಣೆಯಾಗಿ ತೆಗೆದುಕೊಂಡರು. ಸಹ ಅಂತಹ ದೇಶಗಳಲ್ಲಿ ಸ್ತ್ರೀಯರ ಸ್ಥಾನಮಾನವು ಪುರುಷರಿಗಿಂತ ಕೀಳಾಗಿರುವುದೇ ಕಂಡುಬರುತ್ತದೆ. ಪ್ರತಿ ಸಮಾಜದ ಮಹಿಳೆಯ ಸ್ಥಾನಮಾನವು ಆ ಸಮಾಜವು ಆಕೆಗೆ ಕೊಟ್ಟ ಪಾತ್ರ ಹಾಗೂ ಆಕೆಯ ಬಗ್ಗೆ ತಾಳಿರುವ ಮನೋಭಾವಗಳ ಮೇಲೆ ಅವಲಂಭಿತವಾಗಿರುತ್ತದೆ. ಭಾರತದಲ್ಲಿ ಮಹಿಳೆಯರ ಸ್ಥಾನಮಾನದ ಸಮಿತಿಯ ಅವಲೋಕನದ ಪ್ರಕಾಖ ಸಾಮಾಜಿಕ ವಿಚಾರ ಸರಣಿಕೆಯಿಂದ ಮೊಳಕೆಯೊಡೆದು ಸಾಮಾಜಿಕ ಸಂಸ್ಥೆಗಳು ಮತ್ತು ಸಾಮಾಜಿಕ ಮನೋಭಾವನೆಗಳು ಮಹಿಳಾ ಚಟುವಟಿಕೆಯ ನಮೂನೆಗಳ ಮೇಲೆ ಪ್ರಭಾವ ಬೀರುತ್ತವೆ. ಹಾಗೆಯೇ ಎರಡು ಲಿಂಗಗಳ ನಡುವೆ ಖಚಿತವಾದ ಜೈವಿಕ ವ್ಯತ್ಯಾಸವಿದ್ದರೂ ಸಹ ಪುರುಷ ಪ್ರಧಾನ ಸಮಾಜ ಅವಳನ್ನು ತಾರತಮ್ಯ ರೀತಿಯಿಂದ ನಡೆಸಿಕೊಂಡು ಮಹಿಳೆಯನ್ನು ಮೂಲೆಗುಂಪು ಮಾಡಿದೆ. ಕೆಲವು ಚಿಂತಕರುಗಳು ಜೈವಿಕ ಅಂಶಗಳು ಆಕೆಯ ಕೀಳರಿಮೆಗೆ ಕಾರಣವೆಂದರೆ ಮತ್ತೆ ಕೆಲವರು ಸಾಮಾಜಿಕ ಅಂಶವು ಕೂಡ ಮುಖ್ಯ ಕಾರಣ ಎಂದಿದ್ದಾರೆ. ಈ ನಿಟ್ಟಿನಲ್ಲಿ ಪ್ರಸ್ತುತ ಲೇಖನವು ಮಹಿಳಾ ಚಳುವಳಿಯ ಮೂಲಕ ಮಹಿಳಾ ಅಭಿವೃದ್ಧಿ ಮತ್ತು ಸಬಲೀಕರಣದ ವಿಭಿನ್ನ ದೃಷ್ಟಿಕೋನದ ಅಂಶಗಳನ್ನು ಓದುಗರ ಮುಂದಿರಿಸಿದೆ.

## ಭಾರತದಲ್ಲಿ ಮಹಿಳೆಯರ ಸ್ಥಾನಮಾನ

ಪುರುಷರಂತೆ ಸ್ತ್ರೀಯರೂ ಸಮಾಜದ ಘಟಕ, ಸಮಾಜದ ಸ್ಥಿರತೆ ಮತ್ತು ಐಕ್ಯತೆ ಮಾನವರ ಸುಖ, ನಾಗರೀಕತೆ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಪುರುಷರಂತೆ ಸ್ತ್ರೀಯರೂ ಕಾರಣರು. ಅವರು ಸಮಾಜದಲ್ಲಿ ಪ್ರಧಾನ ಪಾತ್ರವಹಿಸುತ್ತಿರುವುದ ಅಲ್ಲದೆ ಮಕ್ಕಳನ್ನು ಪಡೆದು ಮಾನವ ಜನಾಂಗವು

ಅವ್ಯಾಹತವಾಗಿ ಮುಂದುವರೆಯಲು ಕಾರಣರಾಗಿದ್ದಾರೆ. ಮಹಿಳೆಯರು ಪ್ರೀತಿ, ವಾತ್ಸಲ್ಯ, ಸೌಜನ್ಯ ಸಹನೆ ಮತ್ತು ಸದ್ಗುಣಗಳ ಸಾಕಾರಮೂರ್ತಿಗಳು ಅವರು, ಮೃದು, ಸ್ವಭಾವದವರು, ದಯಾಮಯ ಹಾಗೂ ಕೋಮಲೆಯರು ಆಗಿದ್ದಾರೆ. ಸುಖಮಯ ವೈವಾಹಿಕ ಜೀವನ ಮತ್ತು ತೃಪ್ತಿಕರ ಕೌಟುಂಬಿಕ ಜೀವನದ ಯಶಸ್ಸು ಅಂತಿಮವಾಗಿ ಸ್ತ್ರೀಯನ್ನೇ ಅವಲಂಬಿಸಿದೆ. ಇವೆಲ್ಲಾ ಹಿರಿಮೆಗಳಿದ್ದಾಗ್ಯೂ ಸಹ ಸ್ತ್ರೀಯರು ಹಿಂದೂ ಸಮಾಜದಲ್ಲಿ ಅವಗಣನೆ, ಶೋಷಣೆ, ದುರಾಚಾರ ಮತ್ತು ತಾರತಮ್ಯಕ್ಕೆ ಒಳಗಾಗಿದ್ದಾರೆ. ಮಹಿಳೆಯರ ಸ್ಥಾನಮಾನವು ಭಾರತದಲ್ಲಿ ವಿಭಿನ್ನ ಕಾಲಗಳಲ್ಲಿ ವಿಭಿನ್ನ ರೀತಿಯಲ್ಲಿ ಏರಿಳಿತಗಳ ಸುಳಿಗೊಳಗಾಗಿತ್ತು.

ವೇದಗಳ ಕಾಲದಲ್ಲಿ ಹಿಂದೂ ಸ್ತ್ರೀಯರು ಅತ್ಯಂತ ಉನ್ನತ ಸ್ಥಾನವನ್ನು ಹೊಂದಿದ್ದರು. ಸ್ತ್ರೀಯರಿಗೂ ವಿದ್ಯಾಭ್ಯಾಸಕ್ಕೆ ಅವಕಾಶ ಮತ್ತು ಅನುಮತಿ ಇತ್ತು. ವೇದಪೂರ್ವ ಮತ್ತು ವೇದೋತ್ತರ ಕಾಲಗಳಿಗಿಂತ ವೇದಗಳ ಕಾಲದಲ್ಲಿ ಸ್ತ್ರೀಯರು ಹೆಚ್ಚು ಸ್ವಾತಂತ್ರ್ಯವನ್ನು ಹೊಂದಿದ್ದಳು. ಸತಿಪತಿಯರಿಬ್ಬರೂ ಒಟ್ಟಿಗೆ ಪೂಜಾಕಾರ್ಯಗಳಲ್ಲಿ ತೊಡಗುತ್ತಿದ್ದರು. ಸ್ತ್ರೀಯು ವೈದಿಕ ಮಂತ್ರಗಳನ್ನು ಪಠಿಸಲು ಮತ್ತು ತನ್ನ ಪತಿಯ ಗೈರು ಹಾಜರಿಯಲ್ಲಿ ಯಜ್ಞ ಯಾಗಾದಿಗಳನ್ನು ಆಚರಿಸಲೂ ಅವಕಾಶವಿದ್ದಿತು. ಪ್ರತಿಯೊಬ್ಬ ಗೃಹಸ್ಥನೂ ತನ್ನ ಹೆಂಡತಿಯೊಡಗೂಡಿ ಧಾರ್ಮಿಕ ಕ್ರಿಯಾ ವಿಧಿಗಳನ್ನು ಮತ್ತು ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿತ್ತು. ಪತ್ನಿಯಿಲ್ಲದೆ ಪತಿಯು ತಪಸ್ಸು ಮಾಡುವಂತಿಲ್ಲವೆಂದು ಋಗ್ವೇದವು ನಿಗದಿಪಡಿಸಿದೆ. ಸ್ತ್ರೀ ಮತ್ತು ಪುರುಷರಿಬ್ಬರೂ ವಿವಾಹವೆಂಬ ಸಂಸ್ಕಾರದ ಮೂಲಕ ಮಿಲನ ಹೊಂದಿದರೆ ಮಾತ್ರ ಹಿಂದೂ ವಿವಾಹದ ಪ್ರಾಥಮಿಕ ಧ್ಯೇಯಗಳಾದ ಧರ್ಮ, ಪ್ರಜೋತ್ಪತ್ತಿ, ರತಿ ಇವುಗಳನ್ನು ಈಡೇರಿಸಬಹುದು. ಯಜ್ಞ ಯಾಗಾದಿಗಳಲ್ಲಿ ಪಾಲ್ಗೊಳ್ಳುವ ಹೆಂಡತಿಗೆ ಮಾತ್ರ ಪತ್ನಿ ಎಂಬ ಪದವು ಅನ್ವಯವಾಗುತ್ತದೆಂದು ಪಾಣಿನಿಯು ತಿಳಿಸಿದ್ದಾನೆ. ಗೃಹಸೂತ್ರ ಮತ್ತು ಧರ್ಮಶಾಸ್ತ್ರಕಾರರು, ಹೆಂಡತಿಯ ಜವಾಬ್ದಾರಿಯುತ ಸ್ಥಾನವನ್ನು ಮಾನ್ಯ ಮಾಡಿದ್ದಾರೆ. ಹೆಂಡತಿಯನ್ನು ಸಹಧರ್ಮಿಣಿ ಎಂದು ಪರಿಗಣಿಸಲಾಗಿದೆ.

ಪುರಾಣಗಳ ಕಾಲವನ್ನು ರಾಮಾಯಣ ಮತ್ತು ಮಹಾಭಾರತಗಳ ಕಾಲವೆಂದು ಕರೆಯಲಾಗಿದೆ. ಈ ಕಾಲದಲ್ಲಿಯೂ ಸ್ತ್ರೀಯರ ಸ್ಥಿತಿ ಉತ್ತಮವಾಗಿತ್ತು. ಸ್ತ್ರೀಯರು ಸಾಕಷ್ಟು ಸ್ವಾತಂತ್ರ್ಯವನ್ನು ಹೊಂದಿದ್ದರು. ರಾಜವಂಶ ಮತ್ತು ಶ್ರೀಮಂತ ಕುಟುಂಬಗಳಲ್ಲಿನ ಸ್ತ್ರೀಯರು ಶಿಕ್ಷಣ ಪಡೆಯುವುದು ಘನತೆಯ ವಿಷಯವಾಗಿತ್ತು. ಕೌಸಲ್ಯ ಮತ್ತು ತಾರ ಇವರು ವೇದ ಪಾರಂಗತರಾಗಿದ್ದರು. ಮಹಾ ಭಾರತದ ಕಾಲದಲ್ಲಿ ಸುಲಭ ಮತ್ತು ದ್ರೌಪದಿ ಇವರು ಘನಪಂಡಿತೆಯಾಗಿದ್ದರು. ತಮ್ಮ ಗಂಡಂದಿರು ಧರ್ಮ ಮಾರ್ಗವನ್ನು ಪಾಲಿಸುವಂತೆ ಸ್ತ್ರೀಯರು ಮಾರ್ಗದರ್ಶನ ನೀಡುತ್ತಿದ್ದರು. ವೀರಶೂರ ಸ್ತ್ರೀಯರಿದ್ದುದ್ದಕ್ಕೆ ಹಲವಾರು ನಿದರ್ಶನಗಳಿವೆ.

ಮಧ್ಯಯುಗದ ಕಾಲದಲ್ಲಿ ಭಾರತೀಯ ಸ್ತ್ರೀಯರು ಹಿಂದೆ ಹೊಂದಿದ ಅಂತಸ್ಸನ್ನು ಕಳೆದುಕೊಳ್ಳಲು ಪ್ರಾರಂಭಿಸಿದರು. ಸಮಾಜದಲ್ಲಿ ಅವರ ಸ್ಥಾನಮಾನವು ಇಳಿಮುಖವಾಗಲು ಪ್ರಾರಂಭವಾಯಿತು.

ಬ್ರಾಹ್ಮಣದ ಹಿಡಿತದಿಂದಾಗಿ ಬೌದ್ಧ ಧರ್ಮದ ಆದರ್ಶಗಳು ಮೂಲೆಗುಂಪಾದವು. ಸ್ತ್ರೀಯರು ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದುದು ಕೇವಲ ಕೆಲವು ವ್ರತಗಳನ್ನು ಆಚರಿಸುವುದಕ್ಕೆ ಮಾತ್ರ ಸೀಮಿತವಾಯಿತು. ಅವರಿಗೆ ವೇದಗಳ ಪಠನಾ ಸೌಲಭ್ಯವು ಕಳೆದು ಹೋಯಿತು. ಸ್ತ್ರೀಯರು ಬಾಳ ಸಂಗಾತಿಯನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಕಳೆದುಕೊಂಡರು. ವಿವಾಹ ಕಡ್ಡಾಯಗೊಂಡು ವಿವಾಹದ ವಯಸ್ಸು 8 ಅಥವಾ 10 ವರ್ಷಗಳಿಗೆ ಇಳಿಯಿತು. ಅವಿವಾಹಿತರಾಗಿ ಉಳಿಯುವುದನ್ನು ಪ್ರೋತ್ಸಾಹಿಸುತ್ತಿರಲಿಲ್ಲ. ಬ್ರಾಹ್ಮಣ ಜಡಿಲತ್ವ ಮತ್ತು ವೈದಿಕ ಕಾನೂನುಗಳನ್ನು ತಪ್ಪಾಗಿ ವ್ಯಖ್ಯಾನಿಸಲಾದ್ದರಿಂದ ಸ್ತ್ರೀಯರ ಸ್ವಾತಂತ್ರ್ಯಕ್ಕೆ ಅಡ್ಡಿಯಾಯಿತು. ಅವರು ಶಿಕ್ಷಣದಿಂದ ವಂಚಿತರಾದರು. ವಿಧವಾ ಪುನರ್ವಿವಾಹವನ್ನು ನಿಷೇಧಿಸಲಾಯಿತು. ಆಸ್ತಿಯ ಹಕ್ಕನ್ನು ತಡೆಹಿಡಿಯಲಾಯಿತು. ಆಕೆಯ ವ್ಯಾಪ್ತಿಯನ್ನು ಗಹಕೃತ್ಯಗಳಿಗೆ ಸೀಮಿತಗೊಳಿಸಲಾಯಿತು. ಆಯಾಸಕರ ಮನೆಗೆಲಸ, ಮೌಢ್ಯತೆ, ಬೇಗ ಮಕ್ಕಳನ್ನು ಹಡೆಯುವುದೂ, ಇವೆಲ್ಲವೂ ಸ್ತ್ರೀಯರನ್ನು ದೈಹಿಕ ಆಯಾಸ ಮತ್ತು ಮಾನಸಿಕ ಹಿಂಸೆಗೆ ಗುರಿ ಮಾಡಿದವು ಹೀಗೆ ಹಲವು ರೀತಿಯಲ್ಲಿ ಮಹಿಳೆಯರು ತಮ್ಮ ಅಸ್ತಿತ್ವವನ್ನು ಮಧ್ಯಯುಗದಲ್ಲಿ ಕಳೆದುಕೊಳ್ಳತೊಡಗಿದರು.

ಮುಸ್ಲಿಮರ ಕಾಲದಲ್ಲಿ ಭಾರತೀಯ ಸ್ತ್ರೀಯರ ಸ್ಥಾನಮಾನವು ಇನ್ನೂ ಅಧೋಗತಿಳಿಸಿತು. ಸ್ತ್ರೀ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಮತ್ತಷ್ಟು ಮೊಟಕುಗೊಳಿಸಲಾಯಿತು. ಮುಸ್ಲಿಮರು ಪರದಾಪದ್ಧತಿಯನ್ನು ಜಾರಿಗೆ ತಂದಿದ್ದರಿಂದ ಸ್ತ್ರೀಯರ ಜೀವನ ವ್ಯಾಪ್ತಿಯು ಮನೆಗೆ ಮಾತ್ರ ಸೀಮಿತವಾಯಿತು. ಮುಸ್ಲಿಮರ ಸಂಪ್ರದಾಯವಾದ ಬಹುಪತ್ನಿತ್ವ ವಿವಾಹವನ್ನು ಹಿಂದೂಗಳು

ಅಳವಡಿಸಿಕೊಂಡಿದ್ದರಿಂದ ವಿವಾಹಿತ ಸ್ತ್ರೀಯರಿಗೆ ಹಿಂದೆಂದೂ ಕಂಡರಿಯದ ಅವಹೇಳನ ಮತ್ತು ಕಿರುಕುಳ ಪ್ರಾರಂಭವಾಯಿತು. ಬಹುಪತ್ನಿಯರನ್ನು ಹೊಂದುವುದು ಘನತೆಯ ವಿಷಯವಾಯಿತು. ಸ್ತ್ರೀಯರು ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಚರ್ಚೆಗಳಲ್ಲಿ ಪಾಲ್ಗೊಳ್ಳುವುದು ಇವೆಲ್ಲವೂ ಗತಕಾಲದ ವೈಭವಗಳಾದವು. ವಿಧವಾ ಪುನರ್ವಿವಾಹ ಕನಸಾಯಿತು. ಬಾಲ್ಯವಿವಾಹ ವ್ಯಾಪಕಗೊಂಡಿತು. ಸ್ತ್ರೀಯರಿಗೆ ಶಿಕ್ಷಣ ಸೌಲಭ್ಯ ತಪ್ಪಿತು, ಪರದಾಪದ್ಧತಿಯು ಹೆಚ್ಚು ವ್ಯಾಪಕವಾಯಿತು. ಈ ಕಾಲದಲ್ಲಿ ಸ್ತ್ರೀಯರ ಸ್ಥಾನಮಾನವು ನಿರಂತರವಾಗಿ ಕ್ಷೀಣಿಸಿದವು. ಸ್ತ್ರೀಯರನ್ನು ಕೀಳೆಂದು ಪರಿಗಣಿಸಲಾಯಿತು. ಸಾಮಾಜಿಕವಾಗಿ ಆಕೆಯ ಎಲ್ಲಾ ಹಕ್ಕುಗಳನ್ನು ಮೊಟಕುಗೊಳಿಸಲಾಯಿತು. ಆರ್ಥಿಕವಾಗಿ ಆಕೆಯು ಪುರುಷಾವಲಂಬಿಯಾದಳು. ರಾಜಕೀಯವಾಗಿ ನಿರ್ಲಕ್ಷಿಸಲ್ಪಟ್ಟು ತನ್ನ ಅಸ್ತಿತ್ವವನ್ನು ಕಳೆದುಕೊಂಡಳು. ಹೀಗೆ ಮಹಿಳೆಯು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳತೊಡಗಿದಳು.

ಸ್ವಾತಂತ್ರ್ಯ ನಂತರ ಅಥವಾ ಆಧುನಿಕ ಕಾಲದಲ್ಲಿ ಧಾರ್ಮಿಕ ಚಳುವಳಿ ಮತ್ತು ಸುಧಾರಣೆಗಳ ಪಾತ್ರ ಹೆಚ್ಚು ಮಹತ್ವ ಪಡೆಯಿತು. ಬೌದ್ಧ ಧರ್ಮ, ಜೈನಧರ್ಮ, ವೈಷ್ಣವ ಪಂಥ, ವೀರಶೈವ ಧರ್ಮ, ಸಿಖ್‌ಧರ್ಮ, ಕ್ರೈಸ್ತ ಧರ್ಮಗಳು, ಸ್ತ್ರೀಯರ ಏಳಿಗೆಗೆ ತಮ್ಮದೇ ಆದ ಕಾಣಿಕೆ ಸಲ್ಲಿಸಿವೆ. ಭಕ್ತಿಪಂಥವು ಭಾರತದ ಸ್ತ್ರೀಯರ ಸ್ಥಾನಮಾನಗಳು ಉನ್ನತಿಗೆ ಶ್ರಮಿಸಿತು. ಕಬೀರ್ ನಾಮದೇವ, ರಾಮದಾಸ್, ರಾಮಾನುಜಾಚಾರ್ಯ, ಶಂಕರಾಚಾರ್ಯ, ಬಸವಣ್ಣ ಮುಂತಾದ ಸಾಧುಸಂತರು ಮತ್ತು ಸಮಾಜ ಸುಧಾರಕರು ಸ್ತ್ರೀ ಪುರುಷ ನಡುವೆ ಸಮಾನತೆಯನ್ನು ಬೋಧಿಸಿದರು. ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರು ಮನೆಯಿಂದ ಹೊರಬಂದು ಇಂತಹ ಸಂತರ ಉಪದೇಶಗಳನ್ನು ಆಲಿಸಿದರೂ, ಮತ್ತು ತಮ್ಮ ಹಕ್ಕುಗಳ ಬಗ್ಗೆ ಅರಿವು ಮೂಡಿಸಿಕೊಂಡರು. ಈ ಅವಧಿಯಲ್ಲಿ ಮಹಿಳೆಯರು ಜಾಗೃತರಾಗಿ ತಮ್ಮ ಕಳೆದುಹೋದ ಸಮಾನತೆಯನ್ನು ಹಂತ ಹಂತವಾಗಿ ಮತ್ತೆ ಪಡೆಯತೊಡಗಿದರು ಎಂದರೆ ತಪ್ಪಾಗಲಾರದು.

## ರಾಷ್ಟ್ರೀಯ ಮಟ್ಟದಲ್ಲಿ ಮಹಿಳಾ ಹೋರಾಟಗಳು ಮತ್ತು ಮಹಿಳಾ ಅಭಿವೃದ್ಧಿ ಮತ್ತು ಸಬಲೀಕರಣ

ಭಾರತದಲ್ಲಿ ಮಹಿಳಾ ಚಳುವಳಿಗಳು ಹೊಸತೇನು ಅಲ್ಲ. ಮಹಿಳೆಯ ವಿಮೋಚನೆಗಾಗಿ ಆಂದೋಲನಗಳು, ಚಳುವಳಿಗಳು ಹಾಗೂ ಸ್ತ್ರೀವಾದಿ ಚಿಂತನೆಯನ್ನು ನಾವು 19ನೇ ಶತಮಾನದಲ್ಲಿಯೇ ನೋಡಬಹುದು. ಅನೇಕ ಹೋರಾಟಗಳಿಗೆ, ಆಂದೋಲನಗಳಿಗೆ ಚಳುವಳಿಗಳಿಗೆ, ಮಹಿಳೆಯ ಮೇಲಾಗುತ್ತಿರುವ ದಬ್ಬಾಳಿಕೆ ಅನ್ಯಾಯ ಅಸಮಾನತೆ ಹಾಗೂ ಅವಳ ಹೀನಾಯ ಪರಿಸ್ಥಿತಿಯೇ ಕೇಂದ್ರಬಿಂದುವಾಗಿತ್ತು. ಭಾರತದಲ್ಲಿ ಮಹಿಳಾ ಚಳುವಳಿಗೆ ಅನೇಕ ಆಯಾಮವಿದೆ. ಏಕೆಂದರೆ ಭಾರತವೇ ವಿವಿಧತೆಯಿಂದ ಕೂಡಿದ ದೇಶವಾದ ಕಾರಣ, ಇಲ್ಲಿಯ ಮಹಿಳೆಯರ ಸಮಸ್ಯೆಗಳು ಹಾಗೂ ವಿಚಾರದಾರೆ ಸರಣಿಗಳು ವಿವಿಧತೆಯಿಂದ ಕೂಡಿದೆ. ಮಾಲಾ ತುಲ್ಲಕರ ಪುಸ್ತಕವಾದ "ರೈಟಿಂಗ್ ದಿವುಮೆನ್ಸ್ ಮೂವೆಂಟ್ ಎ ರೀಡರ್‌ನಲ್ಲಿ ಭಾರತದ ಮಹಿಳಾ ಚಳುವಳಿಯ ಬಗ್ಗೆ ಒಂದೇ ಒಂದು ಮಾತನಾಡುವುದು ಅಸಾದ್ಯಬದಲಾಗಿ ಅನೇಕ ಚಳುವಳಿಯ ಬಗ್ಗೆ ಹೇಳಬೇಕೆಂದಿದ್ದಾರೆ ಆಗಾಗಿ ಭಾರತದಲ್ಲಿ ಮಹಿಳಾ ಚಳುವಳಿಗಳು, ವರದಕ್ಷಿಣೆಯ ಬಗ್ಗೆ, ಸತಿಪದ್ಧತಿ, ಬಾಲ್ಯ ವಿವಾಹ, ಪರದಾ ಪದ್ಧತಿ, ಅಹಿಂಸೆ, ಭ್ರೂಣಹತ್ಯೆ, ಹಾಗೂ ಅನ್ಯಾಯದ ವಿರುದ್ಧ ಹೋರಾಡುತ್ತಿದೆ. 19ನೇ ಶತಮಾನದ ಅಂತ್ಯಭಾಗದಲ್ಲಿ ಮಹಿಳೆಯರು. ರಾಜಕೀಯ ರಂಗದಲ್ಲಿ ಸಂಪೂರ್ಣ ಭಾಗವಹಿಸುವುದಕ್ಕಾಗಿ ತಮ್ಮಷ್ಟಕ್ಕೆ ತಾವೇ ಸಂಘಟಿತರಾಗಿ ಹೋರಾಡಲು ಸಿದ್ಧರಾದರು. ಕೆಲವು ಸ್ತ್ರೀ ವಾದಿಗಳ ಪ್ರಕಾರ ಮಹಿಳೆಯು ಭಾಗವಹಿಸಿದ ಎಲ್ಲಾ ಚಳುವಳಿಗಳನ್ನು ಮಹಿಳಾ ಚಳುವಳಿಗಳೆಂದು ಒಪ್ಪಿಕೊಳ್ಳದೆ ಕೇವಲ ಸ್ತ್ರೀ ಶಿಕ್ಷಣ ಸತಿ ಪದ್ಧತಿ ನಿರ್ಮೂಲನೆ ಪರದಾ ಪದ್ಧತಿ, ಬಾಲ್ಯ ವಿವಾಹ, ಮತದಾನದ ಹಕ್ಕು ವಿದ್ಯಾಭ್ಯಾಸ ಇವುಗಳು ಕೇವಲ ಮಹಿಳಾ ಚಳುವಳಿಯ ಅಂಶಗಳಾಗಿವೆ. ಆದರೆ ಸಮಾಜ ಸುಧಾರಣಾ ಚಳುವಳಿಗಳಿಂದಾಗಿ ಮಹಿಳೆ ಮನೆಯ ಹೊರಬರಲು ಅವಕಾಶ ಕಲ್ಪಿಸಿ, ಧೈರ್ಯ ಮತ್ತು ಸ್ಥೈರ್ಯ ತಂದುಕೊಟ್ಟು ಚಳುವಳಿಗೆ ಪ್ರೋತ್ಸಾಹ ಕೊಟ್ಟಿದೆ ಎನ್ನಬಹುದು.

ಇಂದು ಹಲವು ಚಳುವಳಿಯ ಪ್ರತಿಫಲವಾಗಿ ಅಥವಾ ಸ್ವಸಾಮಥ್ರ್ಯದಿಂದ ಹಲವಾರು ಮಹಿಳೆಯರು ಅಭಿವೃದ್ಧಿ ಹೊಂದುತ್ತಾ ಸಬಲೀಕರಣಗೊಳ್ಳುತ್ತಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ಮೀರಾಕುಮಾರ್, ಮಮತಾ ಬ್ಯಾನರ್ಜಿ, ಮಾಯಾವತಿ, ಸೋನಿಯಾಗಾಂಧಿ, ಇಂದಿರಾಗಾಂಧಿ, ಸುಷ್ಮಸ್ವರಾಜ್, ಕ್ರೀಡಾ ಕ್ಷೇತ್ರದಲ್ಲಿ ಸಾನಿಯಾ ಮಿರ್ಜಾ, ಸೈನಾ ನೆಹ್ವಾಲ್, ಮಿಥಾಲಿರಾಜ್, ಮಮತಾ ಮೆರಿಕೋಮ್, ಅಶ್ವಿನಿ ಪೂಣಪ್ಪ, ಪಿ.ವಿ. ಸಿಂಧು, ಸಿನಿಮಾ ರಂಗದಲ್ಲಿ ಹೇಮಮಾಲಿನಿ, ಜಯಲಲಿತ, ತಾರಾ, ಶೃತಿ, ಸೌಂದರ್ಯ, ಪ್ರೇಮ, ಮಂಜುಳ, ಸುಮಲತ,

ಖುಷ್ಬು ಹಾಗೂ ಉದ್ಯಮಿಗಳಾಗಿ ಪೈಲೆಟ್‌ಗಳಾಗಿ ಮುಂತಾದ ಕ್ಷೇತ್ರಗಳಲ್ಲಿ ಮಹಿಲೆಯರು ಇಂದು ಅಭಿವೃದ್ಧಿ ಹೊಂದುತ್ತಿರುವುದನ್ನು ನೋಡಬಹುದು.

ಒಟ್ಟಾರೆಯಾಗಿ ಸ್ತ್ರೀಯರ ಚಳುವಳಿಯ ಬದಲಾವಣೆಗಳನ್ನು ಹೀಗೆ ಹೇಳಬಹುದು.

1. ಮಹಿಳೆಯರು ಪುರುಷರಿಗೆ ಸಮಾನರು ಎಂಬುದನ್ನು ನಿರೂಪಿಸುತ್ತಿರುವುದು
2. ಹಿಂದೆ ಮಹಿಳೆ ತಂದೆ ಅಥವಾ ಗಂಡ ಅಥವಾ ಮಗನ ಮೂಲಕ ತನ್ನ ತನವನ್ನು ಗುರ್ತಿಸಿಕೊಳ್ಳುತ್ತಿದ್ದು ಪರವಾಲಂಬಿಯಾಗಿದ್ದಳು. ಆದರೆ ಇಂದು ಆಕೆಯು ಸ್ವತಂತ್ರಳಾಗಿ ತನ್ನ ತನವನ್ನು ತಾನೇ ಗುರ್ತಿಸಿಕೊಳ್ಳುವಂತಾಗಿದೆ.
3. ಸಾಂಪ್ರದಾಯಿಕ ನಂಬಿಕೆಗಳಿಗೆ ಗಂಟು ಬೀಳದೆ ತನ್ನ ಸ್ವಂತ ಸಾಮರ್ಥ್ಯ ಮತ್ತು ಅರ್ಹತೆಯಿಂದ ತನ್ನ ಜೀವನವನ್ನು ತಾನೇ ರೂಪಿಸಿಕೊಳ್ಳುವಂತಹವಳಾಗಿದ್ದಾಳೆ.
4. ಮಹಿಳೆಯು ನಾಯಕತ್ವದ ಗುಣಗಳನ್ನು ಕರಗತ ಮಾಡಿಕೊಂಡಿದ್ದಾಳೆ.
5. ಆಧುನಿಕ ಮಹಿಳೆಯು ಹಳೆಯದರ ಮೂಲಾಧಾರದ ಮೇಲೆ ಹೊಸತನವನ್ನು ಬೆಳೆಸಿಕೊಂಡಿದ್ದಾಳೆ.
6. ಪುರುಷ ಸಮಾನ ಸ್ಥಾನಮಾನವನ್ನು ಪಡೆಯುವಂತಳಾಗಿದ್ದಾಳೆ.
7. ಆಧುನಿಕ ಮಹಿಳೆಯು ಆಕಾಂಕ್ಷೆಗಳು, ನಿರೀಕ್ಷೆಗಳು ಮತ್ತು ಆಸಕ್ತಿಗಳ ರಾಶಿಯನ್ನೆ ಹೊಂದಿದ್ದಾಳೆ. ಬಾಳಿನಲ್ಲಿ ಸೋತರೆ, ಎದೆಗುಂದುವುದಿಲ್ಲ. ಧೈರ್ಯವಾಗಿ ಸೋಲನ್ನು ಎದುರಿಸುತ್ತಾಳೆ.

## ಪರಿ ಸಮಾಪ್ತಿ

ಇಂದಿನ ಆಧುನಿಕ ಯುಗದಲ್ಲಿ ಮಹಿಳೆಯರಲ್ಲಿ ಕಂಡುಬರುತ್ತಿರುವ ಸಕಾರಾತ್ಮಕ ಬೆಳವಣಿಗೆಗೆ, ಅಭಿವೃದ್ಧಿ ಉತ್ತಮ ಆಲೋಚನೆ, ಇವುಗಳು ಕಂಡುಬಂದರೆ ಅವುಗಳನ್ನು ಪ್ರೋತ್ಸಾಹಿಸುವುದು ಸಮಾಜದ ಪ್ರತಿಯೊಬ್ಬನ ಕರ್ತವ್ಯ ಸಮಾಜಕ್ಕೆ ಪುರುಷ ಏಷ್ಯ ಮುಖ್ಯನೋ, ಮಹಿಳೆಯು ಅಷ್ಟೆ ಮುಖ್ಯ ಎಂಬುದನ್ನು ಪ್ರತಿಯೊಬ್ಬರು ಅರಿತುಕೊಳ್ಳಬೇಕು.

ಈ ದಿಸೆಯಲ್ಲಿ ಸಮಾಜದ ಸ್ವಸ್ಥ ಮನಸ್ಸಿನ ನಾಗರೀಕರು, ಸಮಾಜ ಸೇವಕರು, ಮಹಿಳಾ ಹೋರಾಟಗಾರರು, ಸಂಘಟಿಕರು, ಮಹಿಳೆಯರ ಅಭಿವೃದ್ಧಿಗಾಗಿ ಹಾಗೂ ಸಬಲೀಕರಣಕ್ಕಾಗಿ ಕಂಕಣಬದ್ಧವಾಗಿ ದುಡಿದಾಗ ಮಾತ್ರ ಮಹಿಳಾ ಸಬಲೀಕರಣ ಸಾಧ್ಯ ಮಾಜದಲ್ಲಿ ಉದ್ಭಣಗೊಳ್ಳುವ ಸಮಸ್ಯೆಗಳಿಗೆ ತಕ್ಷಣವೇ ಪರಿಹಾರ ಸೂಚಿಸುವುದು, ಎಷ್ಟು ಜಾಗತ ಕೆಲಸವೋ ಹಾಗೆಯೇ ಪ್ರಗತಿಯತ್ತ ಸಾಗುತ್ತಿರುವ ಯೋಜನೆಗಳ ಜಾಡು ವೈಫಲ್ಯಗಳನ್ನು ಗುರುತಿಸಿ ಒರೆ-ಕೋರೆಗಳನ್ನು ತಿದ್ದುವುದು ಅಷ್ಟೆ ಮಹತ್ವವಾದ ಕೆಲಸವಾಗಿದೆ.

## ಆಕಾರ ಗ್ರಂಥಗಳು


1. Mukherjee AB. Female Participation in India : patterns and Associations, Tiydschrit : Vour Eco, Geografic, 1972.
2. ಡಾ. ಟಿ.ಎಸ್. ವೆಂಕಟೇಶ ಮತ್ತು ವೇಣುಗೋಪಾಲ ಜಿ.ಎಸ್, ಸ್ತ್ರೀ ಚಿಂತನೆ (2012) ಅನ್ನಪೂರ್ಣ ಪ್ರಕಾಶನ, ಬೆಂಗಳೂರು.
3. ಪ್ರೊ.ಎನ್.ಬಿ. ಪಾಟೀಲ: ಮಾನವ ಹಕ್ಕುಗಳು, ಅರುಣ ಪ್ರಕಾಶನ, ಬಿಜಾಪುರ, 2008.
4. ಪ್ರೊ.ಎಂ. ನಾರಾಯಣ : ಭಾರತೀಯ ಸಮಾಜ : ಚೇತನ ಬುಕ್ ಹೌಸ್, ಮೈಸೂರು, 2005.
5. Ahkar. The Position of Women in Hindu civilization, BEnaras : Motilal Banarasi Das, 1956.
6. Internal and New Papers Source.